
ಚಿತ್ರಕಥೆ

# ಪಂಚತಂತ್ರ ಕಥೆ

## ಉರುಳಿಬಿದ್ದ ಗಡಿಗೆ



ಒಂದು ನಗರದಲ್ಲಿ ಸ್ವಭಾವಕೃಪಣ ಎಂಬ ಬ್ರಾಹ್ಮಣನಿದ್ದನು. ಅವನು ಭಿಕ್ಷೆ ಬೇಡಿ ಜೀವಿಸುತ್ತಿದ್ದನು. ಭಿಕ್ಷೆ ಬೇಡಿ ತಂದ ಹಿಟ್ಟನ್ನು ಅಡಿಗೆ ಮಾಡಿ ತಿಂದು, ಉಳಿದಿದ್ದನ್ನು ಒಂದು ಗಡಿಗೆಯಲ್ಲಿ ಕೂಡಿಡುತ್ತಿದ್ದನು. ಅದನ್ನು ಮನೆಯಲ್ಲಿ ನೇತುಹಾಕಿದ್ದ ಒಂದು ಗೂಟಕ್ಕೆ ಸಿಕ್ಕಿಸಿಡುತ್ತಿದ್ದನು. ಪ್ರತಿದಿನವೂ ಅದನ್ನು ನೋಡುತ್ತ ನೋಡುತ್ತ ಮಲಗುತ್ತಿದ್ದನು.

ಒಂದು ದಿನ ಹೀಗೆಯೇ ಮಾಡಿ ಮಲಗಿದನು. ಹಿಟ್ಟಿನ ಗಡಿಗೆಯನ್ನು ನೋಡುತ್ತ, ನೋಡುತ್ತ ಅವನಿಗೆ ಈ ಯೋಚನೆ ಬಂತು: " ಈ ಹಿಟ್ಟನ್ನು ಬರಗಾಲದ ಸಮಯದಲ್ಲಿ ಮಾರಿದರೆ ನನಗೆ ಒಂದುನೂರು ರೂಪಾಯಿ ಸಿಗುತ್ತದೆ. ಅದರಿಂದ ನಾನು ಎರಡು ಆಡುಗಳನ್ನು ಕೊಂಡುಕೊಳ್ಳುತ್ತೇನೆ. ಆರು ತಿಂಗಳಿಗೊಮ್ಮೆ ಅವು ಮರಿಗಳನ್ನು ಹಾಕುತ್ತವೆ. ಹೀಗೆ ಸ್ವಲ್ಪಕಾಲದ ನಂತರ ಮನೆಯಲ್ಲಿ ಆಡುಗಳ ಹಿಂಡೇ ಆಗಿಬಿಡುತ್ತದೆ. ನಂತರ ಆ ಆಡುಗಳನ್ನು ಮಾರಿಬಿಟ್ಟು, ಆಕಳುಗಳನ್ನು ಕೊಳ್ಳುತ್ತೇನೆ. ಆಮೇಲೆ ಆಕಳುಗಳನ್ನು ಮಾರಿ ಎಮ್ಮೆಗಳನ್ನು ಕೊಳ್ಳುತ್ತೇನೆ. ತದನಂತರ ಎಮ್ಮೆಗಳನ್ನು ಮಾರಿ ಕುದುರೆಗಳನ್ನು ಖರೀದಿಸುತ್ತೇನೆ. ಕುದುರೆಗಳ ಸಂತತಿ ಹೆಚ್ಚಾಗುತ್ತಾ ಹೋದ ಹಾಗೆ, ನನ್ನ ಐಶ್ವರ್ಯವೂ ಹೆಚ್ಚಾಗುತ್ತ ಹೋಗುತ್ತದೆ."

"ನನಗೆ ಬಂದ ಸಂಪತ್ತಿನಿಂದ ಎರಡು ಅಂತಸ್ತುಗಳ ಮನೆ ಕಟ್ಟಿಸುತ್ತೇನೆ. ಒಬ್ಬಳು ಪ್ರಾಪ್ತವಯಸ್ಸಿನ ಸುಂದರ ಕನ್ಯೆಯೊಡನೆ ನನಗೆ ಮದುವೆಯೂ ಆಗುವುದು. ನಂತರ ಒಬ್ಬ ಮಗನು ಹುಟ್ಟುತ್ತಾನೆ. ಅವನಿಗೆ ಸೋಮಶರ್ಮ ಎಂದು ಹೆಸರು ಇಡುತ್ತೇನೆ. ಅವನು ಅಂಬೆಗಾಲಿನಲ್ಲಿಯೇ ಮನೆಯಲ್ಲೆಲ್ಲ ಓಡಾಡುವನು. ನಾನು ಆಗ ಪುಸ್ತಕ ಓದುತ್ತ ಮಲಗಿರುತ್ತೇನೆ. ಆದರೆ ಮಗುವಿನ ಕಡೆಯೇ ನನ್ನ ಗಮನವಿರುತ್ತದೆ. ಮಗು ಅಂಬೆಗಾಲಿಡುತ್ತ, ಕುದುರೆಯ ಹತ್ತಿರ ಬರುತ್ತದೆ. ಆದರೆ ಅವನ ತಾಯಿ ಮನೆಗೆಲಸದಲ್ಲಿ ಮಗ್ನಳಾಗಿರುತ್ತಾಳೆ. ಮಗುವನ್ನು ಗಮನಿಸುವುದೇ ಇಲ್ಲ. ಇದರಿಂದ ನನಗೆ ಕೋಪ ಬರುತ್ತದೆ. ನಾನು ಸಿಟ್ಟಿನಿಂದ ಹೀಗೆ ಒದೆಯುವೆನು." ಹೀಗೆ ಯೋಚಿಸುತ್ತ, ಕಾಲೆತ್ತಿ ಅವನು ಜಾಡಿಸಿ ಒದ್ದುಬಿಟ್ಟನು. ಒದ್ದ ರಭಸಕ್ಕೆ ಗಡಿಗೆ ಒಡೆದುಹೋಯಿತು. ಅದರಲ್ಲಿದ್ದ ಹಿಟ್ಟೆಲ್ಲ ಚೆಲ್ಲಿಹೋಯಿತು. ಅವನ ಮುಖವೆಲ್ಲ ಬೆಳ್ಳಗಾಗಿ ಹೋಯಿತು. ಅದಕ್ಕೇ ಹೇಳುವುದು: "**ಅನಾವಶ್ಯಕವಾಗಿ ಗಾಳಿಗೋಪುರವನ್ನು ಕಟ್ಟಬಾರದು. ವಾಸ್ತವ ದೃಷ್ಟಿಯಿಂದ ಆಲೋಚನೆ ಮಾಡಬೇಕು**" ಎಂದು.

### ಸಂಸ್ಕೃತಿ ಪರಿಚಯ
#### ಜೈನ-ಬೌದ್ಧ ದರ್ಶನಗಳು

ವೇದಗಳ ನಂತರ ಬೆಳೆದು ಬಂದ ಜೈನ ಮತ್ತು ಬೌದ್ಧ ಧರ್ಮಗಳು ವೇದಗಳ ಸಾರ್ವಭೌಮತ್ವವನ್ನು ಒಪ್ಪುವುದಿಲ್ಲ. ಆದರೆ ಅವುಗಳ ಚಿಂತನೆ ಉಪನಿಷತ್ ಚಿಂತನೆಯ ಜೊತೆಗೆ ಸಮಾನತೆಯನ್ನು ಹೊಂದಿದೆ. ಅತಿಯಾದ ಕರ್ಮವನ್ನು, ಪ್ರಾಣಿಬಲಿಯನ್ನು ಮತ್ತು ಪೌರೋಹಿತ್ಯವನ್ನು ಇವು ವಿರೋಧಿಸುತ್ತವೆ. ಅವೈದಿಕ ಎಂದು ಕರೆಸಿಕೊಳ್ಳುವ ಈ ಮತಗಳ ಸಾಮಾನ್ಯ ಲಕ್ಷಣಗಳು ಇವು : **೧. ಅವು ವೇದಪ್ರಾಮಾಣ್ಯವನ್ನು ಒಪ್ಪುವುದಿಲ್ಲ. ಆದ್ದರಿಂದ ನಾಸ್ತಿಕ ದರ್ಶನಗಳು ಎಂದು ಕರೆಸಿಕೊಳ್ಳುತ್ತವೆ. ೨. ಸಾಮಾಜಿಕ ಸ್ಥಾನ ಹಾಗೂ ವರ್ಣ ಆಶ್ರಮಗಳ ಭೇದವಿಲ್ಲದೆ ಎಲ್ಲರನ್ನೂ ಅವು ತಮ್ಮ ಧರ್ಮದೊಳಗೆ ಬರಮಾಡಿಕೊಳ್ಳುತ್ತಿದ್ದವು. ೩. ನೈತಿಕ ಮೌಲ್ಯಗಳಿಗೆ ಪ್ರಾಮುಖ್ಯತೆಯನ್ನು ನೀಡಿದ್ದವು. ೪. ಪ್ರಾಪಂಚಿಕ ಜೀವನದಿಂದ ಬಿಡುಗಡೆ ಪಡೆಯಲು ನಿರ್ಲಿಪ್ತ ಜೀವನವೇ ಶ್ರೇಷ್ಠ ಎಂದು ಹೇಳುತ್ತಿದ್ದವು. ೫. ವಿರಕ್ತ ಅಥವಾ ತ್ಯಾಗೀ ಜೀವನಕ್ಕೆ ಪ್ರಾಮುಖ್ಯತೆ ನೀಡಿದ್ದವು.**

ಜೈನಧರ್ಮದ ಪ್ರವರ್ತಕ ಪ್ರಥಮ ತೀರ್ಥಂಕರನಾದ **ಋಷಭದೇವ**. ಆದರೂ ಜೈನಧರ್ಮದ ಬೆಳವಣಿಗೆ ಗಮನೀಯವಾಗಿ ಆಗಿದ್ದು ೨೪ನೆಯ ತೀರ್ಥಂಕರನಾದ ಮಹಾವೀರನ ಕಾಲದಲ್ಲಿ. ಅಹಿಂಸೆಯ ಪಾಲನೆ, ಕಠಿಣವ್ರತಚರ್ಯೆ ಜೈನಧರ್ಮದ ಮುಖ್ಯ ಲಕ್ಷಣಗಳು. ಭಾರತದ ಸಾಹಿತ್ಯ, ಶಿಲ್ಪಕಲೆ ಮುಂತಾದ ವಿವಿಧ ರಂಗಗಳಲ್ಲಿ ಜೈನರ ಕೊಡುಗೆ ಅಪಾರ.

ಜೈನಧರ್ಮಕ್ಕಿಂತಲೂ ಅತ್ಯಂತ ವಿಸ್ತಾರವಾಗಿ ಶಾಖೋಪಶಾಖೆಗಳಾಗಿ ಕವಲುಹೊಂದಿದ ಧರ್ಮವೆಂದರೆ ಬೌದ್ಧ ಧರ್ಮ. ಅದು ದಕ್ಷಿಣ ಏಷಿಯಾದ ಹಲವು ಭಾಗಗಳಿಗೆ ಪ್ರಸಾರವಾಗಿ ಪ್ರಭಾವ ಬೀರಿತು. ಗೌತಮ ಬುದ್ಧನ ಉದಾತ್ತ ವ್ಯಕ್ತಿತ್ವ ಮತ್ತು ಉಪದೇಶಗಳ ಆಧಾರದ ಮೇಲೆ ಪ್ರಾಚೀನ ಬೌದ್ಧಧರ್ಮ ಸ್ಥಾಪನೆ ಆಯಿತು. ಬಳಿಕ ತಲೆದೋರಿದ ತಾತ್ತ್ವಿಕ ಭಿನ್ನಾಭಿಪ್ರಾಯಗಳಿಂದ **ಹೀನಯಾನ, ಮಹಾಯಾನ ಮತ್ತು ವಜ್ರಯಾನ**ವೇ ಮೊದಲಾದ ಹಲವು ಪಂಗಡಗಳಾಗಿ ಒಡೆಯಿತು. ನಂತರ, ಬೌದ್ಧಧರ್ಮವು ಇತರ ದೇಶಗಳಲ್ಲಿ ಉಳಿದುಕೊಂಡಿತಾದರೂ ಭಾರತದಲ್ಲಿ ಬಹುತೇಕ ಮರೆಯಾಯಿತು.

**(ಮುಂದಿನ ತಿಂಗಳು: ಆಸ್ತಿಕ ದರ್ಶನಗಳು)**

### ಸ್ವಾಮಿ ವಿವೇಕಾನಂದರ ಪ್ರಕಾರ ಶಿಕ್ಷಣದಿಂದ ಕಲಿಯಬೇಕಾದ ಗುಣಗಳು

## ಏಕಾಗ್ರತೆ

**ದ್ರೋಣಾಚಾರ್ಯರು** ಪಾಂಡವರ ಮತ್ತು ಕೌರವರ ಗುರುಗಳು. ಅವರು ಒಂದು ದಿನ ತಮ್ಮ ಶಿಷ್ಯರನ್ನೆಲ್ಲ ಕರೆದರು. ಅವರು ಒಂದು ಮರದ ಮೇಲೆ ಒಂದು ಬಣ್ಣದ ಹಕ್ಕಿಯನ್ನು ಕಟ್ಟಿದ್ದರು. ಒಬ್ಬನನ್ನು ಕರೆದು ಬಾಣ ಮತ್ತು ಬಿಲ್ಲುಗಳನ್ನು ಕೊಟ್ಟು ಕೇಳಿದರು: "ಮಗೂ, ನಿನಗೆ ಏನು ಕಾಣುತ್ತಿದೆ?" ಅವನು ಹೇಳಿದ: "ನನಗೆ ಮರ ಕಾಣುತ್ತಿದೆ; ಹಕ್ಕಿ ಕಾಣುತ್ತಿದೆ." ದ್ರೋಣಾಚಾರ್ಯರು ಬೇಸರದಿಂದ "ಸರಿ, ನೀನು ಹೋಗು" ಎಂದರು. ನಂತರ ಇನ್ನೊಬ್ಬನನ್ನು ಕರೆದರು. ಅವನಿಗೂ ಇದೇ ಪ್ರಶ್ನೆಯನ್ನು ಕೇಳಿದರು. ಅವನು "ನನಗೆ ಹಕ್ಕಿ ಮಾತ್ರ ಕಾಣುತ್ತಿದೆ" ಹೇಳಿದ. ಆಗಲೂ ದ್ರೋಣಾಚಾರ್ಯರು ಬೇಸರಪಟ್ಟುಕೊಂಡು ಕಳಿಸಿಬಿಟ್ಟರು.

ನಂತರ ತಮ್ಮ ಪ್ರಿಯಶಿಷ್ಯನಾದ ಅರ್ಜುನನನ್ನು ಕರೆದರು. "ಅರ್ಜುನಾ, ನಾನು ತೋರಿಸಿದ ದಿಕ್ಕಿನಲ್ಲಿಯೇ ಸರಿಯಾಗಿ ದಿಟ್ಟಿಸಿ ನೋಡು. ನಿನಗೆ ಏನು ಕಾಣಿಸುತ್ತದೆ?" ಎಂದು ಕೇಳಿದರು. ಅರ್ಜುನ ತನ್ನ ಬಾಣವನ್ನು ಬಿಲ್ಲಿಗೆ ಹದೆಯೇರಿಸಿ ಹೇಳಿದ, "ಗುರುಗಳೇ ನನಗೆ ಹಕ್ಕಿಯ ತಲೆ ಮಾತ್ರ ಕಾಣುತ್ತಿದೆ. ಬೇರೆ ಏನೂ ಕಾಣುತ್ತಿಲ್ಲ." ದ್ರೋಣಾಚಾರ್ಯರು ಸಂತೋಷಪಟ್ಟರು. "ಭಲೇ! ಅರ್ಜುನ, ಗುರಿಯಿಟ್ಟು ಅದನ್ನು ಹೊಡೆದುಹಾಕು." ಅರ್ಜುನ ಅದಕ್ಕೆ ಗುರಿಯಿಟ್ಟು ಹೊಡೆದ ಕೂಡಲೇ ಹಕ್ಕಿ ಕೆಳಗೆ ಉರುಳಿಬಿತ್ತು. ಸ್ವಾಮಿ ವಿವೇಕಾನಂದರು ಹೀಗೆ ಹೇಳುತ್ತಾರೆ:

"ನನ್ನ ದೃಷ್ಟಿಯಲ್ಲಿ ವಿದ್ಯಾಭ್ಯಾಸದ ಸಾರವೇ ಮನಸ್ಸಿನ ಏಕಾಗ್ರತೆ. ಬರಿಯ ವಿಷಯಸಂಗ್ರಹವಲ್ಲ. ನಾನು ಪುನಃ ವಿದ್ಯಾಭ್ಯಾಸವನ್ನು ಪ್ರಾರಂಭಿಸಬೇಕಾದರೆ, ಈ ನಿಟ್ಟಿನಲ್ಲಿ ನನಗೇನಾದರೂ ಸ್ವಲ್ಪ ಸ್ವಾತಂತ್ರ್ಯವಿದ್ದರೆ ನಾನು ವಿಷಯಗಳನ್ನು ಕಲಿತುಕೊಳ್ಳುವುದಿಲ್ಲ. ನಾನು ಮೊದಲು ಮನಸ್ಸನ್ನು ಹೇಗೆ ಏಕಾಗ್ರಗೊಳಿಸುವುದು ಮತ್ತು ಅದನ್ನು ಹೇಗೆ ಹಿಂದಕ್ಕೆ ಸೆಳೆಯುವುದು ಎಂಬುದನ್ನು ಕಲಿತುಕೊಂಡು ಅನಂತರ ಒಂದು ಸರಿಯಾದ ಉಪಕರಣದಿಂದ ನನ್ನ ಇಚ್ಛೆಯ ಪ್ರಕಾರ ವಿಷಯಗಳನ್ನು ಸಂಗ್ರಹಿಸುತ್ತೇನೆ." (ಮುಂದಿನ ತಿಂಗಳು: ಶ್ರದ್ಧೆ)



### ಒಳ್ಳೆಯ ಗುಣಗಳು

### ಸತ್ಯ

ಸತ್ಯ ಎಂದರೆ ಸುಳ್ಳು ಹೇಳದೆಯೆ ಇರುವುದು ಮಾತ್ರವಲ್ಲ. ನಮ್ಮ ಮನಸ್ಸು, ನಮ್ಮ ಮಾತು, ನಮ್ಮ ಕೆಲಸಕಾರ್ಯಗಳು– ಇವು ಒಂದೇ ರೀತಿ ಇರುವುದನ್ನೇ ಸತ್ಯಪಾಲನೆ ಎನ್ನುತ್ತಾರೆ. ಅಂದರೆ, ನಮ್ಮ ಮನಸ್ಸಿನಲ್ಲಿ ಒಳ್ಳೆಯ ಆಲೋಚನೆಗಳನ್ನು ಮಾಡಬೇಕು. ಮನಸ್ಸಿನಲ್ಲಿ ಏನು ಯೋಚನೆ ಮಾಡುತ್ತೇವೆಯೋ, ಅದನ್ನೇ ಮಾತಿನಲ್ಲೂ ಆಡಬೇಕು. ನಾವು ಏನು ಮಾತನಾಡುತ್ತೇವೆಯೋ ಅದರಂತೆಯೇ ನಡೆದುಕೊಳ್ಳಬೇಕು. ಹೀಗೆ ನಡೆದುಕೊಂಡಾಗ ನಾವು ಸುಳ್ಳು ಹೇಳುವುದಕ್ಕೆ ಆಗುವುದಿಲ್ಲ. ಸುಳ್ಳು ಹೇಳಿದರೆ ನಮಗೇ ನಾವು ಮೋಸಮಾಡಿಕೊಂಡಂತೆ. ಸುಳ್ಳು ಹೇಳುವುದು ಅಭ್ಯಾಸವಾದರೆ ಅದನ್ನು ಬಿಡುವುದು ಬಹಳ ಕಷ್ಟ. ಇದರಿಂದ ಸುತ್ತಲಿನ ಜನಕ್ಕೆ ನಮ್ಮ ಮೇಲೆ ನಂಬಿಕೆ ಹೋಗಿಬಿಡುತ್ತದೆ. ಹರಿಶ್ಚಂದ್ರ ತಾನು ಕೊಟ್ಟ ಮಾತನ್ನು ಉಳಿಸಿಕೊಳ್ಳುವುದಕ್ಕಾಗಿ ಎಷ್ಟು ಕಷ್ಟಪಟ್ಟನು! ಆಧುನಿಕ ಕಾಲದಲ್ಲಿ ಸತ್ಯ ಮತ್ತು ಅಹಿಂಸೆಗಳಿಗೆ ಮಹಾತ್ಮ ಗಾಂಧಿ ತುಂಬ ಪ್ರಾಮುಖ್ಯತೆ ಕೊಟ್ಟರು. ದೇವರು ಸತ್ಯಸ್ವರೂಪ ಎಂದು ನಮ್ಮ ಧರ್ಮಗ್ರಂಥಗಳು ಹೇಳುತ್ತವೆ. ಆದ್ದರಿಂದ ಭಗವಂತನ ಅನುಗ್ರಹ ಪಡೆಯಲು ಸತ್ಯವಂತರಾಗಬೇಕು. ಅದಕ್ಕಾಗಿ ಕಷ್ಟಪಡಲೂ ತಯಾರಾಗಿರಬೇಕು. ಸತ್ಯವನ್ನು ಬಿಟ್ಟು ಎಂದಿಗೂ ನಡೆಯಬಾರದು. (ಮುಂದಿನ ತಿಂಗಳು: ಅಸ್ತೇಯ)

### ಮಹತ್ಕಾರ್ಯಗಳನ್ನು ಸಾಧಿಸುವುದು ಹೇಗೆ?

ಪ್ರತಿಯೊಬ್ಬರೂ ತಮ್ಮ ಕೈಲಾದಷ್ಟು ಕಷ್ಟಪಟ್ಟಲ್ಲದೆ ಏನನ್ನಾದರೂ ಮಾಡಲು ಸಾಧ್ಯವೇ? **ಉದ್ಯೋಗಿನಂ ಪುರುಷಸಿಂಹಮುಪೈತಿ ಲಕ್ಷ್ಮೀಃ** – ಕಾರ್ಯೋನ್ಮುಖನಾಗಿರುವ ಪುರುಷಸಿಂಹನನ್ನು ಲಕ್ಷ್ಮಿಯು ಆಶ್ರಯಿಸುವಳು. ಹಿಂತಿರುಗಿ ನೋಡುವ ಆವಶ್ಯಕತೆ ಇಲ್ಲ. ಮುಂದೆ ನೋಡಿ– ನಮಗೆ ಅನಂತ ಶಕ್ತಿ, ಅನಂತ ಉತ್ಸಾಹ, ಅನಂತ ಧೈರ್ಯ. ಅನಂತ ತಾಳ್ಮೆ ಬೇಕು. ಆಗ ಮಾತ್ರ ಮಹತ್ಕಾರ್ಯಗಳನ್ನು ನಾವು ಸಾಧಿಸಬಹುದು. –ಸ್ವಾಮಿ ವಿವೇಕಾನಂದ